ಮನೆಯಲ್ಲಿರಬೇಕಾದ ಅಮ್ಮನಿಗೆ, ತಂಗಿಗೆ ಯಾವ್ಯಾವ ಚುಚ್ಚು ಮಾತುಗಳನ್ನು ಕೇಳಬೇಕಾದ ಪ್ರಸಂಗ ಒದಗಿ ಬರುತ್ತದೆಯೋ ಯಾರಿಗೆ ಗೊತ್ತು? ತನ್ನಿಂದಾಗಿ ಇವರ ನೆಮ್ಮದಿಗೆ ಭಂಗ ಬರುವ ಪ್ರಸಂಗ ಬಂದರೆ? ಅಮ್ಮನನ್ನು ಸುಖವಾಗಿಟ್ಟುಕೊಳ್ಳಬೇಕಾದವನು ಅವಳ ಸಮಾಧಾನಕ್ಕೆ ಕುತ್ತು ತರುವಂತಾದರೆ? ಕರುಣಾಕರ ಹಿರಿಯಪ್ಪನ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದ್ದ. ಮೆಕ್ಯಾನಿಕಲ್ ಡಿಪ್ಲೊಮಾ ಮುಗಿಸಿಕೊಂಡಿದ್ದ. ಅಷ್ಟರಲ್ಲಿ ಹಿರಿಯಪ್ಪ ಎರಡನೇ ಮಗಳ ಮದುವೆ ಮಾಡಿ ಮುಗಿಸಿದ್ದ. ಮೊದಲಿನದೇ ಜರ್ಬಿನಿಂದ. ಈ ತಂಗಿ ಕೂಡಾ ಅಕ್ಕನಂತೆ ಸಂಪನ್ನರ ಮನೆ ಸೇರಿಕೊಂಡಿದ್ದಳು. ಕರುಣಾಕರನ ಮನಸ್ಸಿನೊಳಗೆ ಕೊರೆಯುತ್ತಿತ್ತು ಕೀಟ. ಈ ದುಂದು ವೆಚ್ಚದಲ್ಲಿ ತಮ್ಮ ಪಾಲಿನದಾಗಿದ್ದ ಹಣವೂ ಸೇರಿಕೊಂಡಿರಬಹುದಲ್ಲವೇ? ತನ್ನ ಸೌಕರ್ಯಕ್ಕೆ ಒದಗದ ತನ್ನಪ್ಪನ ಪಾಲಿನ ಹಣ...

***

ಓದು ಮುಗಿಸಿದ ಶುರುವಿನಲ್ಲಿ ಕರುಣಾಕರನಿಗೆ ಒಂದು ಸಂದೇಹ ಇತ್ತು. ಮುಗೀತಲ್ಲ ಓದಿದ್ದು? ಇನ್ನು ಜಮೀನು, ಮನೆ ಅಂತ ನೋಡಿಕೊಂಡು ಮನೆಯಲ್ಲಿರು. ನಂಗೂ ಸಪೋರ್ಟಾಗಿರುತ್ತೆ ಎನ್ನುವ ಮಾತು ಹಿರಿಯಪ್ಪನ ಬಾಯಿಂದ ಕೇಳಿ ಬಂದೀತೆನ್ನುವ ಅನುಮಾನ.

'ಬೆಂಗಳೂರಿಗೆ ಹೋದ್ರೆ ಒಂದಲ್ಲಾ ಒಂದು ಕಡೆ ಕೆಲಸ ಸಿಗುತ್ತೆ' ಅಂದಿದ್ದ ಕರುಣಾಕರ.

'ಹೋಗು ಮಾರಾಯಾ, ನಾನ್ಯಾಕೆ ಅಡ್ಡ ಬರ್ಲಿ? ಈ ಕಾಲದಲ್ಲಿ ಜಮೀನು, ಮನೆ ನಂಬ್ಕಂಡು ಬದುಕು ಮಾಡೋದು ಕಷ್ಟಾನೇ. ಇವತ್ತಿದ್ದ ರೇಟು ನಾಳೆಗಿರಲ್ಲ. ಕೆಲಸದೋರನ್ನ ನಂಬ್ಕಂಡಿರೋ ಕಾಲ ಯಾವತ್ತೋ ಮುಗಿದು ಹೋಗಿದೆ. ನನ್ನ ಕಾಲಕ್ಕೆ ಮುಗೀಲಿ ಈ ಒದ್ದಾಟ, ಗುದ್ದಾಟ...'

ಮೂಗಿನ ಮೇಲೆ ಬೆರಳಿಟ್ಟುಕೊಂಡಿದ್ದ ಕರುಣಾಕರ. ಇಷ್ಟು ಸಲೀಸಾಗಿ ಕಳಚಿಕೊಳ್ಳುವ ಮಾತಾಡುತ್ತಿರುವ ಈ ಹಿರಿಯಪ್ಪ ದೊಡ್ಡ ಓದು ಓದಲು ಹೊರಟರೆ ಅಡ್ಡಗಾಲು ಹಾಕಿದ್ಯಾಕೆ? ಹಾಗೆ ನೋಡಿದರೆ ಕೈಗೆ ಸಂಬಳದ ದುಡ್ಡು ಸಿಕ್ಕಿದರೆ ಮನಸ್ಸು ಎಲ್ಲಿಗೆ ಬೇಕಾದರೂ ಎಳೆಯುವ ಸಾಧ್ಯತೆ ಹೆಚ್ಚಿರುತ್ತದೆಯೋ ಅಥವಾ ಹಿರಿಯಪ್ಪ ಲೆಕ್ಕ ಮಾಡಿ ದುಡ್ಡು ಬಿಚ್ಚಬಹುದಾಗಿದ್ದ ಕಾಲದಲ್ಲಿ ಸಾಧ್ಯತೆ ಹೆಚ್ಚಿರುತ್ತಿತ್ತೋ? ಕೆಲಸಕ್ಕೆ ಸೇರಿಕೊಳ್ಳುವ, ಮುಂದೆ ಸಾಧ್ಯವಾದರೆ ತನ್ನ ಮಹದಾಸೆಯ ಎಂಜಿನಿಯರಿಂಗ್ ಓದುವ ಕನಸಿನ ಹಿಂದೆ ಬಿದ್ದವನು ಹಿರಿಯಪ್ಪ ತಡೆ ಹಾಕಿದರೂ ಕೆಲಸಕ್ಕೆ ಸೇರಿಕೊಳ್ಳುವ ಕುರಿತು ದೃಢ ನಿಶ್ಚಯ ಮಾಡಿಯಾಗಿತ್ತು. ಆದರೂ ಹಿರಿಯಪ್ಪನ ಬಾಯಿಂದ



ಸಮ್ಮತಿಯ ಮುದ್ರೆ ಬಿದ್ದರೆ ತನ್ನಮ್ಮನಿಗೊಂದು ಸಮಾಧಾನ. ತನಗೂ ಊರಿಗೆ ಬಂದು, ಹೋಗಿ ಮಾಡಿಕೊಂಡಿರಲು ಸಲೀಸು. ಯಾವುದನ್ನು ಕಮಲಾಕ್ಷಿ ಬೇಡವೆಂದುಕೊಂಡಿದ್ದಳೋ ಅದಕ್ಕೆ ಅವಳ ಬಾವನೇ ಹಸಿರು ನಿಶಾನೆ ತೋರಿಸಿಬಿಟ್ಟಿದ್ದರು. ಆ ಕಾಲ ಬರಿಯ ಮೂರು ವರ್ಷ ಮುಂದೂಡಲ್ಪಟ್ಟಿತ್ತು, ಅಷ್ಟೇ. ಒಂದು ಕುಟುಂಬ ಸುಖವಾಗಿ ಬದುಕಲು ಯಾವ ಕೊರೆಯೂ ಆಗದಷ್ಟು ಜಮೀನು ಈ ಕುಟುಂಬಕ್ಕಿದೆ. ಹಾಗಿದ್ದರೂ ಯಾಕೆ ಬಾವ ತನ್ನ ಮಗನನ್ನು ತನ್ನ ಕಣ್ಣಳವಿನಿಂದಾಚೆಗೆ ಕಳಿಸುವ ಯೋಚನೆ ಮಾಡುತ್ತಿದ್ದಾರೆ? ಅವರು